(ಅ) ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣ

ಶ್ರೀ ಕೆ.ಎನ್.ನಾಗೇಗೌಡ (ಕಿರುಗಾವಲು) : ಮಾನ್ಯ ಅಧ್ಯಕ್ಷರೇ, ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದಿಂದ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ರೈತರಿಗೆ ಉಂಟಾಗಿರುವ ತೊಂದರೆ ಬಗ್ಗೆ ಸನ್ಮಾನ್ಯ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಪಿ.ಜಿ.ಆರ್.ಸಿಂಧ್ಯ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ, ಮುಖ್ಯಮಂತ್ರಿಗಳ ಪರವಾಗಿ ಈ ಕೆಳಕಂಡ ಹೇಳಿಕೆಯನ್ನು ನೀಡುತ್ತೇನೆ.

1) ವಿಶ್ವೇಶ್ವರಯ್ಯ ನಾಲೆಯ ಕೆಳಗಿನ ಕ್ಷೇತ್ರವು ಮೂಲತಃ 1,20,000 ಎಕರೆಗಳಾಗಿದ್ದು, ಇದಕ್ಕನುಗುಣವಾಗಿ ನಾಲೆಯ ವಿನ್ಯಾಸವನ್ನು ತಯಾರಿಸಲಾಗಿತ್ತು. ಆದರೆ ಹಲವಾರು ಕಾರಣಗಳಿಂದ ಈ ನಾಲೆಯ ಕೆಳಗಿನ ಕ್ಷೇತ್ರವು ಹೆಚ್ಚು ವರಿಗೊಂಡಿದ್ದು ಪ್ರಸ್ತುತ ಈ ನಾಲೆಯು1,90,753 ಎಕರೆ ಪ್ರದೇಶಕ್ಕೆ ನೀರನ್ನು ಒದಗಿಸಬೇಕಾಗಿದೆ. ನಾಲೆಯ ನೀರನ್ನು ಹಾಯಿಸುವ ಸಾಮರ್ಥ್ಯವು 2287 ಕ್ಯೂನೆಕ್ಸ್‌ಗಳಾಗಿದ್ದು, ಪ್ರಸ್ತುತ ನೀರಾವರಿ ಸೌಲಭ್ಯ ಒದಗಿಸಬೇಕಾಗಿರುವ ಕ್ಷೇತ್ರಕ್ಕೆ ಸಮರ್ಪಕವಾಗಿ ನೀರನ್ನು ಒದಗಿಸಲು ಈ ಸಾಮರ್ಥ್ಯವನ್ನು 3060 ಕ್ಯೂನೆಕ್ಸ್‌ಗಳಿಗೆ ಹೆಚ್ಚಿಸಬೇಕಾಗಿದೆ. ಈ ಪರಿಸ್ಥಿತಿಯನ್ನು ಸರಿಪಡಿಸುವ ಸಲುವಾಗಿ ಕೆಳಗೆ ನಮೂದಿಸಿರುವ ಕಾಮಗಾರಿಗಳನ್ನು ಒಳಗೊಂಡಂತೆ ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಯೋಜನೆಯನ್ನು ಕೈಗೊಳ್ಳಬೇಕಾಗಿದೆ.

ಅ) ವಿಶ್ವೇಶ್ವರಯ್ಯ ನಾಲೆಯ ಮೊದಲ 37ನೇ ಕಿ.ಮೀ.ವರೆಗೆ (ಅಂದರೆ ಹುಲಿಕೆರೆ ಸುರಂಗದ ಪ್ರಾರಂಭದವರೆಗೆ ನಾಲೆಯ ಒಡ್ಡುಗಳನ್ನು ಎತ್ತರಿಸುವುದು ಮತ್ತು ಬಲಪಡಿಸುವುದು ಹಾಗೂ ಈ ಬಾಗದಲ್ಲಿ 8 ಅಡ್ಡ ಚರಂಡಿಗಳನ್ನು (ಸಿ.ಡಿ.ವರ್ಕ್ಸ್) ಮತ್ತು 29 ಹಳೆಯದಾದ ರಸ್ತೆ:ಗಾಡಿ ಸೇತುವೆಗಳನ್ನು ಪುನರ್‌ನಿರ್ಮಿಸುವುದು.

ಆ) ವಿಶ್ವೇಶ್ವರಯ್ಯ ನಾಲೆಯ 37ನೇ ಕಿ.ಮೀ. ಇಂದ 27ನೇ ಕಿ.ಮೀ. ಉದ್ದದ ಸಂಪರ್ಕ ನಾಲೆಯನ್ನು ನಿರ್ಮಿಸಿ ಇದರ ಮೂಲಕ 800 ಕ್ಯೂನೆಕ್ಸ್ ಪ್ರಮಾಣದಷ್ಟು ನೀರನ್ನು ಕಾವೇರಿ ಶಾಖೆಗೆ ಒದಗಿಸುವುದರಿಂದ ಹುಲಿಕೆರೆ ಸುರಂಗ ಮಾರ್ಗದ ಮೇಲಿನ ಒತ್ತಡವನ್ನು ಕಡಿಮೆ ಮಾಡುವುದು.

ಇ) ಸರ್ವಕಾಲಿಕ ಕಾವೇರಿ,ಕೆರಗೋಡು, ಮದ್ದೂರು, ಲೋಕಸರ ಶಾಖೆಗಳನ್ನು ಹಾಗೂ ಸರ್ವಕಾಲಿಕವಲ್ಲದ ತುರುಗನೂರು ಮತ್ತು ಹೆಬ್ಬಕವಾಡಿ ಶಾಖೆಗಳನ್ನು ಬಲಪಡಿಸುವುದು ಮತ್ತು ಈ ನಾಲೆಗಳ ವ್ಯಾಪ್ತಿಯಲ್ಲಿ ಬರುವ ಅಡ್ಡಚರಂಡಿಗಳನ್ನು ಮತ್ತು ರಸ್ತೆ: ಗಾಡಿ ಸೇತುವೆಗಳನ್ನು ನವೀಕರಿಸುವುದು.

2) ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಕಾಮಗಾರಿಗಳನ್ನು 1979-80 ರಲ್ಲಿ ಪ್ರಾರಂಭಿಸಲಾಗಿದ್ದು, ಈ ಕಾಮಗಾರಿಗೆ ತಗಲುವ ವೆಚ್ಚವನ್ನು 1993-94ರ ದರಗಳ ಪ್ರಕಾರ 98.34 ಕೋಟಿ ರೂ.ಗಳೆಂದು ಅಂದಾಜು ಮಾಡಲಾಗಿದೆ. 1995ರ ಫೆಬ್ರವರಿ ತಿಂಗಳ ಅಂತ್ಯದವರೆಗೆ ಈ ಕಾಮಗಾರಿಯ ಮೇಲೆ ಮಾಡಲಾಗಿರುವ ವೆಚ್ಚವು 56.35 ಕೋಟಿ ರೂ.ಗಳು ಆಗಿರುತ್ತದೆ.

3) ವಿಶ್ವೇಶ್ವರಯ್ಯ ನಾಲೆಯ ಮೊದಲ 37ನೇ ಕಿ.ಮೀ.ವರೆಗಿನ ಭಾಗದಲ್ಲಿ ನಾಲೆಯ ಒಡ್ಡುಗಳನ್ನು ಬಲಪಡಿಸುವ ಮತ್ತು ಅಡ್ಡ ಚರಂಡಿಗಳ ಕಾಮಗಾರಿಗಳು ಪೂರ್ಣಗೊಂಡಿವೆ. 29 ರಸ್ತೆ: ಗಾಡಿ ಸೇತುವೆಗಳ ಪೈಕಿ ಎರಡನ್ನು ಪೂರ್ಣಗೊಳಿಸಲಾಗಿದ್ದು, 5 ಕಾಮಗಾರಿಗಳು ಪಗತಿಯಲ್ಲಿದೆ. ಉಳಿದ 22 ಸೇತುವೆ ಕಾಮಗಾರಿಗಳನ್ನು ಇನ್ನೂ ಕೈಗೊಳ್ಳಬೇಕಾಗಿದೆ. ಸಂಪರ್ಕ ನಾಲೆಯ ಮೊದಲ 16 ಕಿ.ಮೀ.ಯಲ್ಲಿನ ಮತ್ತು ಈ ನಾಲೆಯಲ್ಲಿ ಬರುವ ಸುರಂಗ ಮಾರ್ಗದ ನಂತರದ ಭಾಗವನ್ನು ಅನೇಕವಾಗಿ ಪೂರ್ಣಗೊಳಿಸಲಾಗಿದ್ದು, ನಾಲೆಯ ಹೊದಿಕೆ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿದೆ. ಈ ಕಾಮಗಾರಿಗಳು ನಾಲೆಯಲ್ಲಿ ನೀರು ಹಾಯಿಸುವುದನ್ನು ನಿಲ್ಲಿಸಲಾಗುವ ಅವಧಿಯಲ್ಲಿ ಮಾತ್ರ ಕೈಗೊಳ್ಳಬಹುದಾಗಿದ್ದು, ಇದನ್ನು ತ್ವರಿತಗೊಳಿಸಲು ವಿಶ್ವೇಶ್ವರಯ್ಯ ನಾಲೆಯ ಅಚ್ಚುಕಟ್ಟಿನ ರೈತರುಗಳ ಸಹಕಾರವೂ ಅತ್ಯವಶ್ಯವಾಗಿದೆ.

4) ವಿಶ್ವೇಶ್ವರಯ್ಯ ನಾಲೆಯ ಆಧುನೀಕರಣದ ಕಾಮಗಾರಿಯನ್ನು 1997-98ನೇ ಸಾಲಿನಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

5) ಪುರಾತನ ಅಣಿಕಟ್ಟಿನ ನಾಲೆಗಳಾದ ಚಿಕ್ಕದೇವರಾಯ ನಾಲೆ, ಮಾಧವಮಂತ್ರಿ ನಾಲೆ ಮತ್ತು ರಾಮಸ್ವಾಮಿ ನಾಲೆ, ಇವುಗಳಲ್ಲಿ ತುಂಬಿರುವ ಹೂಳನ್ನು ತೆಗೆದು ಈ ನಾಲೆಗಳ ಕೆಳಗಿನ ಕ್ಷೇತ್ರಕ್ಕೆ ಸಮರ್ಪಕವಾಗಿ ನೀರನ್ನು ಹಾಯಿಸಲು ಮತ್ತು ಸದರಿ ನಾಲೆಗಳಲ್ಲಿ ಅಲ್ಲಲ್ಲಿ ಕೈಗೊಳ್ಳಬೇಕಾಗಿರುವ ದುರಸ್ಥಿ ಕಾಮಗಾರಿಗಳಿಗೆ ಅವಶ್ಯವಾಗುವ ಅನುದಾನದಲ್ಲಿ ಸಂಭವಿಸುತ್ತಿರುವ ಕೊರತೆಯಿಂದಾಗಿ ಈ ನಾಲೆಗಳ ದುರಸ್ಥಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸಾಧ್ಯವಾಗುವುದಿಲ್ಲ.

6) ವಿಶ್ವೇಶ್ವರಯ್ಯ ಸಾಲೆಯ ಆಧುನೀಕರಣದ ಮತ್ತು ಕಂಡಿಕೆ (15) ರಲ್ಲಿ ತಿಳಿಸಿರುವ ಅಣಿಕಟ್ಟಿನ ಸಾಲೆಗಳ ದುರಸ್ಥಿ ಕಾಮಗಾರಿಗಳನ್ನು ಅತಿ ಶೀಘ್ರವಾಗಿ ಪೂರ್ಣಗೊಳಿಸಿ ಈ ಭಾಗದ ರೈತರುಗಳಿಗೆ ಸಂಭವಿಸುತ್ತಿರುವ ತೊಂದರೆಯನ್ನು ಸರಿಪಡಿಸಲು ಸರ್ವ ಪ್ರಯತ್ನಗಳನ್ನು ಮಾಡಲಾಗುವುದು.

ಶ್ರೀ ಕೆ.ಎನ್. ನಾಗೇಗೌಡ : ಸನ್ಮಾನ್ಯ ಅಧ್ಯಕ್ಷರೆ, ಈಗಾಗಲೇ ಸಮಗ್ರವಾದಂಥ ಉತ್ತರವನ್ನು ಸರ್ಕಾರದವರು ಒದಗಿಸಿದ್ದಾರೆ. ಇಲ್ಲಿ ಮೂಲಭೂತವಾಗಿರತಕ್ಕ ವಿಚಾರವೇನೆಂದರೆ ವರುಣಾ ನಾಲೆಯ ಆಧುನೀಕರಣದ ಹಿನ್ನೆಲೆಯಲ್ಲಿ ಏನು ನಮ್ಮ ಮಂಡ್ಯ ಭಾಗದಲ್ಲಿ ಚಳುವಳಿ ನಡೆಯಿತು ಆಗ ಒಂದು ಒಪ್ಪಂದವಾಗಿತ್ತು. ಅದೇನೆಂದರೆ, ಆದಷ್ಟು ಬೇಗ ಇದನ್ನು ಮುಗಿಸಿ 800 ಕ್ಯೂಸೆಕ್ಸ್‌ಗಳ ನೀರನ್ನು ನಮಗೆ ಜಾಸ್ತಿ ಕೊಡುತ್ತೇವೆ ಎನ್ನತಕ್ಕ ಮಾತನ್ನು ಹೇಳಿದ್ದರು. ಇದರ ಬಗ್ಗೆ ನಮಗಿರುವ ಚಿಂತನೆ ಏನೆಂದರೆ, ಈ ಕೆಲಸವು 1991ಕ್ಕೇ ಮುಕ್ತಾಯವಾಗಬೇಕಾಗಿತ್ತು, ಆದರೆ 1991 ಆದರೂ ಸಹ ಇದು ಮುಕ್ತಾಯವಾಗಿಲ್ಲ. ಈಗ ಬೇಸಿಗೆ ಬಹಳ ಬಾಸ್ತಿ

ಇದೆ. ನಮ್ಮ ಭಾಗದಲ್ಲಿ 1 ಲಕ್ಷದ 90 ಸಾವಿರ ಎಕರೆಗಳಷ್ಟು ಬೆಳೆ ಬೆಳೆದು ನಿಂತಿದೆ. ಹಿಂದೆ 14-15 ವರ್ಷಗಳಿಂದ ನಮಗೆ ಈ ಬೆಳೆಯಾಗಿಲ್ಲ. ಅಚ್ಚು ಕಟ್ಟಿನಲ್ಲಿ ನೀರು ಇಲ್ಲದೆ ಭತ್ತ ಮತ್ತು ಇತರ ಕಬ್ಬುಗಳೂ ಸಹಿತ ಬಹಳ ತೊಂದರೆಯಾಗಿರತಕ್ಕಂಥ ಸಂದರ್ಭದಲ್ಲಿ ಒಂದೇ ಒಂದು ತಾಂತ್ರಿಕವಾದ ಕಾರಣ ಏನೆಂದರೆ ಹಣ ಬಿಡುಗಡೆ ಮಾಡಲಿಲ್ಲ. ಹಿಂದೆ ಇದ್ದಂತಹ ನಮ್ಮ ಉಪ ಮುಖ್ಯ ಮಂತ್ರಿಗಳೂ ಸಹ ಹೋದ ಸಾರಿ 28 ರೂಪಾಯಿಗಳು ಕೊಟ್ಟಿದ್ದರು. ಕೆವಲ 16 ಕೋಟಿ ಮಾತ್ರ ಅದು 10 ಕೋಟಿ ಹಣ ಬಿಡುಗಡೆ ಮಾಡಿ ಹೋದ ಸಾರಿ ಸಹ ಆ ಕೆಲಸ ಆಗಲಿಲ್ಲ. ಕಳೆದ 14-15 ವರ್ಷಗಳಿಂದ ನಿರಂತರವಾಗಿ 90 ಕೋಟಿ ಅಂದರೆ ಇನ್ನು ಸುಮಾರು 70-80 ಕೋಟಿ ರೂಪಾಯಿ ಹಣ ಬೇಕು. ಇದನ್ನು ಬಡ್ಜೆಟ್ಟಿನಲ್ಲಿ ಸೇರಿಸಿದ್ದೀರಿ. ಮೂರು ವರ್ಷದಲ್ಲಿ ಈ ವಿಶ್ವೇಶ್ವರಯ್ಯ ನಾಲ ಆಧುನೀಕರಣವನ್ನು ನಾವು ಉಳಿದಿರತಕ್ಕಂತಹ 60-70 ಕೋಟಿ ಹಣ ಕೊಟ್ಟು ಮುಗಿಸಿಕೊಡುತ್ತೇವೆ ಎನ್ನತಕ್ಕಂತಹ ಮಾತನ್ನು ನಮ್ಮ ಸರ್ಕಾರ ಹೇಳಿದೆ. ಅದಕ್ಕೆ ಬದ್ಧರಾಗಬೇಕು ಅನ್ನುವುದು ಒಂದೇ ಒಂದು ವಿಚಾರ. ಎರಡು, ಅಲ್ಲಿ 8 ಅಕ್ಕಡೇಟ್ ಬರುತ್ತದೆ. ಇಡೀ ಮಂಡ್ಯ ಜಿಲ್ಲೆಯಲ್ಲಿ ಆರು ತಿಂಗಳು ನಾವು ಬೆಳೆ ನಿಲ್ಲಿಸಬೇಕು. ಅದು ತಿಂಗಳು ಎಲ್ಲಾ ನಾಲೆಗಳನ್ನು ಮುಚ್ಚಿ ಬೆಳೆ ನಿಲ್ಲಿಸಬೇಕಾಗುತ್ತದೆ. ಈಗಾಗಲೇ ಕೆ.ಆರ್.ಎಸ್. ಕಮಿಟಿ ಮೀಟಿಂಗ್‌ನಲ್ಲಿ ಬೆಳೆಗಳನ್ನು ನಿಲ್ಲಿಸಬೇಕು ಎನ್ನತಕ್ಕಂತಹ ವಿಚಾರ ಬಂದಾಗ ನಾವು ಹೇಳಿದ್ದು ಸರ್ಕಾರ ಕನಿಷ್ಟ ಪಕ್ಷ ಈ ವರ್ಷ 40 ಕೋಟಿ ರೂಪಾಯಿ ಹಣ ಕೊಟ್ಟು ಚಾನಲ್ ರಿಪೇರಿ ಇವೆಲ್ಲವನ್ನೂ ಮಾಡಿಕೊಡುತ್ತೇವೆ ಎಂದು ಭರವಸೆ ಕೊಟ್ಟರೆ ನಾವು ಮತ್ತು ರೈತ ಸಂಘದವರು, ಮಾನ್ಯ ಪುಟ್ಟಣ್ಣನಯ್ಯನವರ ಎಲ್ಲಾ ರಾಜಕೀಯ ಪಕ್ಷದ ರೈತ ಮುಖಂಡರು ಸೇರಿ ತಾವು ರೈತರಲ್ಲಿ ಮನವಿ ಮಾಡಿಕೊಳ್ಳುತ್ತೇವೆ. ಬೇಸಿಗೆ ಕಾಲದಲ್ಲಿ 96 ಜನವರಿಯಿಂದ ಒಂದು ಮೂರು - ನಾಲ್ಕು ತಿಂಗಳು ಕಾಲ ಇಡೀ ಮಂಡ್ಯ ಜಿಲ್ಲೆಯ ಎಲ್ಲಾ ನಾಲೆಗಳನ್ನು ಬಂದ್ ಮಾಡಿ ನಾಲಾ ರಿಪೇರಿ ಮಾಡಿ ಕೊಡುವುದಕ್ಕೆ ನಾನು ಸಿದ್ದನಿದ್ದೇನೆ. ಆದರೆ ಹಣ ಬಿಡುಗಡೆ ಮಾಡಬೇಕಾಗಿದೆ ನೀವು ಮಾಡುವುದಕ್ಕೆ ಬರುವುದಿಲ್ಲ. ರೈತರು ಹಣ ಬಿಡುಗಡೆ ಮಾಡದೇ ಇದ್ದರೆ ಒಪ್ಪುವುದಿಲ್ಲ. ಏಕೆಂದರೆ 15 ವರ್ಷಗಳಿಂದ ಹಣ ಬಿಡುಗಡೆ ಆಗದೆ ಕೆಲಸ ನಿಂತು ಹೋಗಿದೆ. ಇದು ನಮಗೆ ಮೂರು ಟೆಕ್ನಿಕಲ್ಲಾಗಿ ಆಗಬೇಕು. ಮಾನ್ಯ ಅಧ್ಯಕ್ಷರೆ, ಇನ್ನು ನಮ್ಮ ಕೆಲಸ ಮುಗಿಯಬೇಕಾದರೆ ಅದಕ್ಕೆ ಎಂಟು ಕನೆಕ್ಷನ್ ಕೊಡಬೇಕಾದರೆ 10 ಕೋಟಿ ರೂಪಾಯಿಗಳಷ್ಟು ಹಣಬೇಕು. ಈಗ 20 ಪರ್ಸೆಂಟ್ ಕೆನಾಲ್ ವರ್ಕ್ಸ್ ಇನ್ನೂ ಮುಗಿದಿಲ್ಲ. ಇನ್ನೂ 70 ಪರ್ಸೆಂಟ್ ಕೆನಾಲ್ ವರ್ಕ್ಸ್ ಹಾಗೆಯೇ ಇದೆ. ಈ ದೃಷ್ಟಿಯಿಂದ ನಮಗೆ ಗ್ರಾಂಟ್ ಕೊಡತಕ್ಕಂಥಾದ್ದು ಬಹಳ ಮುಖ್ಯ ಅಲ್ಲ. ನಮಗೆ ಎಲ್ ಓ ಸಿ ಕೊಡತಕ್ಕಂಥದ್ದು ಬಹಳ ಮುಖ್ಯ. ಸುಮಾರು 60-70 ವರ್ಷದ ನಾಲೆಗಳು ಎಲ್ಲಾ ಒಡೆದು ಹೋಗಿವೆ. ಅದಕ್ಕೆ ಕಂಟ್ರೋಲಿಂಗ್ ಸಿಸ್ಟಮ್‌ಗಳು

ಇಲ್ಲ. ಎಲ್ಲಾ ಟ್ಯೂಬುಗಳು ಒಡೆದು ಹೋಗಿವೆ. ಇವತ್ತು ನೀರು ಬಿಟ್ಟರೆ ನಾಳೆ ನೀರೂ ಸಹ ರೈತರಿಗೆ ದೊರಕುತ್ತಿಲ್ಲ. ಈ ದೃಷ್ಟಿಯಿಂದ ಅದರಲ್ಲೂ ವಿಶೇಷವಾಗಿ ಮೂರು ತಾಲ್ಲೂಕುಗಳಾದ ಮದ್ದೂರು, ಮಂಡ್ಯ, ಮಳವಳ್ಳಿ ಈ ಮೂರು ತಾಲ್ಲೂಕುಗಳ ಹಿಂಭಾಗದಲ್ಲಿ ಇರತಕ್ಕಂಥ 70-80 ಸಾವಿರ ಎಕರೆ ಜಮೀನಿಗೆ ಅಂತೂ ತೀವ್ರವಾದಂತಹ ತೊಂದರೆಯಾಗಿದೆ. ಆದರೆ ಬನ್ನೂರುಕ್ಷೇತ್ರಕ್ಕೂ ಹಾಗೂ ನರಸಾಪುರದ ಟೈಲೆಂಡರ್ಸ್‌ಗಳಿಗೆ ತೊಂದರೆಯಾಗಿದೆ. ಇದು ಹಿಂದಿನಿಂದ ಇರತಕ್ಕಂಥದ್ದು. ಮೂರು ವರ್ಷಗಳಲ್ಲಿ ನಾವು ಹಣ ಬಿಡುಗಡೆ ಮಾಡುತ್ತೇವೆ ಇದನ್ನು ಸಂಪೂರ್ಣವಾಗಿ ಮಾಡಿಕೊಡುತ್ತೇವೆ ಎಂದು ತಾವು ಹೇಳಬೇಕು.ಆದರೆ ಈ ವರ್ಷ ಕನಿಷ್ಟ ಪಕ್ಷ 35 ಕೋಟಿ ಎಲ್.ಓ.ಸಿ.ಅದು ಬರೀ ಗ್ರಾಂಟ್ ಎಂದು ಹೇಳಿದರೆ ನಾನು ಒಪ್ಪುವುದಿಲ್ಲ. ನಾವು ಬೇಕಾದಷ್ಟು ಪ್ರಯತ್ನ ಮಾಡಿದೆವು. ಆದರೆ ಆಗಲಿಲ್ಲ. ಅದನ್ನು ಎಲ್ ಓ ಸಿ ಕೊಡತಕ್ಕಂಥದ್ದು ಅನ್ನತಕ್ಕಂತಹದನ್ನು ಹೇಳಬೇಕು. ಏಕೆಂದರೆ ಸರ್ಕಾರಿ ಸಕ್ಕರೆ ಕಾರ್ಖಾನೆ ಇದೆ. ಕಬ್ಬು ಬೆಳೆದಿದೆ ಈ ಎಲ್ಲಾ ದೃಷ್ಟಿಯಿಂದ ತಾವು ಮಾಡಬೇಕು. ಕೆನಾಲ್ ವರ್ಕ್ಸ್ ಮತ್ತು ಬ್ರಿಡ್ಜ್ ವರ್ಕ್ಸ್ ಮಾಡತಕ್ಕಂಥದ್ದು ಮಾತ್ರ ಅಲ್ಲ. ನಾಲಾ ರಿಪೇರಿ ಸಹ ಮಾಡಬೇಕು. ಆ ನಾಲಾ ರಿಪೇರಿಯನ್ನು ನೀವು ಪ್ರೈಯೊರಿಟಿ ಮೇಲೆ ತೆಗೆದುಕೊಳ್ಳುವಂತಹ ಆದೇಶ ಕೊಡಬೇಕು. ಈ 3-4 ವಿಚಾರಕ್ಕೆ ತಾವು ಉತ್ತರ ಹೇಳಿದರೆ ಸಾಕು ಎಂದು ನಾನು ಭಾವಿಸುತ್ತೇನೆ.

ಶ್ರೀ ಎನ್. ಕೃಷ್ಣಪ್ಪ (ಬನ್ನೂರು) : ಮಾನ್ಯ ಮಂತ್ರಿಗಳು ತಮ್ಮ ಸ್ಟೇಟ್‌ಮೆಂಟನ್ನು ಕೊಡುವಾಗ ಒಂದು ಮಾತನ್ನು ಹೇಳಿದ್ದಾರೆ. ಮಾಧವ ಮಂತ್ರಿ ಮತ್ತು ಚಿಕ್ಕದೇವರಾಜ ನಾಲೆ ಹಾಗೂ ರಾಮಸ್ವಾಮಿ ನಾಲೆಗಳ ಹೂಳೆತ್ತುವ ಬಗ್ಗೆ ಸರ್ಕಾರದಲ್ಲಿ ಹಣ ಇಲ್ಲ, ಕೊಡುವುದಕ್ಕಾಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನಾನು ಹೇಳುತ್ತೇನೆ. ಮಾನ್ಯ ಅಧ್ಯಕ್ಷರೆ, ಬಹುಶಃ ಈ ನಾಲಾಗಳು ನೂರಾರು ವರ್ಷಗಳ ಹಳೆ ನಾಲಾಗಳು. ನಿನ್ನೆ ಮೊನ್ನೆಯ ನಾಲಾಗಳು ಅಲ್ಲ. ಇವು ಕನ್ನಂಬಾಡಿ ಕಟ್ಟೆ ಕೃಷ್ಣ ರಾಜ ಸಾಗರ ಕಟ್ಟೆ ಕಟ್ಟುವುದಕ್ಕಿಂತ ಮೊದಲು ಇದ್ದಂತಹ ನಾಲಾಗಳು ಬಹುಶಃ ಈ ನಾಲಾಗಳಲ್ಲಿ ಹಿಂದೆ ಸಿ.ಡಿ.ಎಸ್ ನಾಲೆಗೆ ಸುಮಾರು 900 ಕ್ಯೂಸೆಕ್ಸ್ ನೀರನ್ನು ಕೊಡುತ್ತಿದ್ದರು. ನಮ್ಮಲ್ಲಿ ಉಂಡರೆ ಉಬ್ಬಸ, ಸತ್ತರೆ ಸಂಕಟ. ನೀರನ್ನು ಬಿಡದೆ ಹೋದರೆ ಕೊನೆಯವರಿಗೆ ನೀರು ಮುಟ್ಟುವುದಿಲ್ಲ. ಇಲ್ಲಿ ಬಿಟ್ಟರೆ ನಾಲೆ ನೀರಿನ ಮೇಲೆ ಹೋಗುತ್ತದೆ. ಅಂತಹ ಸಂದರ್ಭದಲ್ಲಿ ಲಿಂಕ್ ಕೆನಾಲ್ ಏನಿದೆ, ಈ ಲಿಂಕ್ ಕೆನಾಲ್ ಆದ ಮೇಲೆ ಇಲ್ಲಿ ಬಿಡತಕ್ಕಂಥ ನೀರು ಏನಿದೆ ಇದು ರಾಮಸ್ವಾಮಿ ನಾಲೆಗೆ ಹೋಗಬೇಕಾಗುತ್ತದೆ. ಈ ನೀರು ರಾಮಸ್ವಾಮಿ ನಾಲೆಗೆ ಹೋದಾಗ ಎಲ್ಲಾ ಅಣ್ಣೆ ಕಟ್ಟುಗಳು ಒಡೆದು ಹೋಗುತ್ತವೆ. ಅದರ ಜೊತೆಗೆ ಈಗಾಗಲೇ ರೈತರು ಲಕ್ಷಾಂತರ ರೂಪಾಯಿಗಳ ನಷ್ಟವನ್ನು ಕ್ಲೇಮ್ ಮಾಡುತ್ತಿದ್ದಾರೆ. ಅದನ್ನು ನಾನು ಸರ್ಕಾರದ ಗಮನಕ್ಕೆ ತಮ್ಮ ಮುಖಾಂತರ ತರುವುದಕ್ಕೆ ಇಚ್ಛೆ ಪಡುತ್ತೇನೆ. ಈಗ ಈ ನಾಲೇಯೇ ಮುಚ್ಚಿ ಹೋದ ಮೇಲೆ ತಾವು ಮಾಡುವದು ಏನು? ತಾವು ಹೊಸ ನಾಲೆಗೆ ಹೆಚ್ಚಿಗೆ ಹಣವನ್ನು ಕೊಡುವಂತಹ ಗಮನವನ್ನು ಏನು ತಾವು

ಹರಿಸುತ್ತೀರಿ, ಅದೇ ರೀತಿ ಇಂತಹ ನೂರಾರು ವರ್ಷಗಳ ನಾಲೆಗಳಲ್ಲಿ ಹೊಳೆತ್ತುವ ಕೆಲಸ ಪ್ರಾರಂಭವಾಗಬೇಕು. ಇವುಗಳನ್ನು ಆದುನೀಕರಣಗೊಳಿಸಿ ಆ ಭಾಗದ ರೈತರಿಗೆ ಸೌಕರ್ಯವನ್ನು ಸರ್ಕಾರ ಮಾಡಿಕೊಡಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ದಯವಿಟ್ಟು ತಾತ್ಸಾರ ಮನೋಭಾವನೆಯನ್ನು ತಾಳುವುದು ಬೇಡ. ಏಕೆಂದರೆ ಅದರಲ್ಲಿ ಸುಮಾರು 15 ಸಾವಿರ ಹೆಕ್ಟೇರ್ ಜಮೀನು ಇವತ್ತು ನೀರಾವರಿ ಆಗುತ್ತಿದೆ. ಇದರ ಮುಖಾಂತರ ಬರತಕ್ಕಂಥ ಚಿನ್ನೂರು ಕೆರೆ ಮತ್ತು ಅದರ ಮೇಲೆ ಹೋಗತಕ್ಕಂಥಹ ಶ್ರೀರಾಮ್ ಎಕ್ಸ್‌ಟೆನ್‌ಷನ್ ಮತ್ತೆ ಇನ್ನೊಂದು ಕಡೆ ಇರತಕ್ಕಂತಹ ರಾಮಸ್ವಾಮಿ ಮತ್ತು ಮಾಧವ ಮಂತ್ರಿ ನಾಲೆಗಳ ಬಗ್ಗೆ ತಾವು ದಯವಿಟ್ಟು ಗಮನವನ್ನು ಹರಿಸಬೇಕಾಗುತ್ತದೆ. ಏಕೆಂದರೆ ಇದರ ಕಡೆ ನೀವು ಏನಾದರೂ ಗಮನ ಕೊಡದೇ ಹೋದರೆ ಆ ಭಾಗದ ರೈತರಿಗೆ ಬಹಳ ಅನ್ಯಾಯವಾಗುತ್ತದೆ. ತಾವು ಏನಾದರೂ ಮಾಡಿ ಸರ್ಕಾರದಿಂದ ಹಣ ಬಿಡುಗಡೆ ಮಾಡಿ ಈ ಹೂಳನ್ನು ತೆಗೆದು ಈ ನಾಲಾಗಳ ದುರಸ್ತೀಕರಣ ಮಾಡಿಕೊಡಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ (ಪಾಂಡವಪುರ) : ಮಾನ್ಯ ಸಭಾಧ್ಯಕ್ಷರೆ, ನಮ್ಮ ಇಬ್ಬರು ಹಿರಿಯ ಸಹ ಸದಸ್ಯರು ವಿಶ್ವೇಶ್ವರಯ್ಯ ನಾಲಾ ಹಾಗೂ ಇನ್ನೊಂದು ಸಿ.ಎಸ್.ನಾಲೆಯ ಬಗ್ಗೆ ಮಾತನಾಡಿದರು. ಏನೇ ಮಾತನಾಡಿದರೂ ಅಲ್ಲಿ ಮುಖ್ಯವಾಗಿ ಬೇಕಾಗಿರುವುದು ಹಣ. ಆಧುನೀಕರಣ ಮಾಡುತ್ತೇವೆಂದು ಹೇಳಿ ಸುಮಾರು 10-15 ವರ್ಷದಿಂದ ಹೇಳುತ್ತಿದ್ದಾರೆ. ಈ ವರುಣಾ ನಾಲೆ ಹಾಗೂ ವಿ ಸಿ ನಾಲೆ ಎರಡೂ ಒಂದೇ ಸಾರಿ ಮುಕ್ತಾಯ ಮಾಡುವಂತಹ ಕಾರ್ಯಕ್ರಮ ಮಾಡುತ್ತೇವೆ ಎಂದು ಹೇಳಿ ಎಂದು ಮಾತುಕತೆ ನಡೆದಿತ್ತು. ಆದರೆ ಈ ಕೆಲಸ ಇನ್ನೂ ಆಗಿಲ್ಲ. ಎಂಟು ಅಕ್ವಡಟ್‌ಗಳನ್ನು ಟರ್ನ್‌ಮಾಡಬೇಕಾದರೆ ಒಂದೇ ಸಾರಿ ಮಾಡಬೇಕು. ಇದಕ್ಕೆ ಬೇಕಾಗುವಷ್ಟು ಹಣವನ್ನು ಕೊಟ್ಟು ಒಂದೇ ಸಾರಿ ಮಾಡಬೇಕು. 20 ದಿವಸದ ಒಳಗೆ ಎಂಟು ಅಕ್ವಡಟ್‌ಗಳ ಕೆಲಸ ಹೆಚ್ಚು ಫಾಸ್ಟಾಗಿ ಆಗಬೇಕು. ಮಾಡದೆ ಇದ್ದರೆ ಎಂಟು ಲಕ್ಷ ಎಕರೆಯಲ್ಲಿ ಇರತಕ್ಕಂತಹ ಬೆಳೆಗೆ ಅನಾನುಕೂಲವಾಗುತ್ತದೆ. ಇದನ್ನು ಅತ್ಯಂತ ಗಂಭೀರವಾಗಿ ಆಲೋಚನೆ ಮಾಡಬೇಕು. ಹೊರ ರಾಜ್ಯಗಳಲ್ಲಿ ಭಾಕ್ರಾನಂಗಲ್‌ನಲ್ಲಿ ಕಾಲುವೆಗಳನ್ನು ಆಧುನೀಕರಣ ಮಾಡಿ ರೈತರಿಗೆ ಯಾವುದೇ ಸಮಸ್ಯೆ ಇಲ್ಲದಂತೆ ಮಾಡಿದ್ದಾರೆ. ಆದ್ದರಿಂದ ತಾವು ವೈಜ್ಞಾನಿಕವಾಗಿ ಆಲೋಚನೆ ಮಾಡಿ ಕಾಲುವೆಗಳನ್ನು ಆಧುನೀಕರಣ ಮಾಡದೇ ಇದ್ದರೆ ಬಹಳ ತೊಂದರೆಯಾಗುತ್ತದೆ. ತಾವೇನೋ ಹೊಸ ಕಾಲುವೆಗಳನ್ನು ಮಾಡುತ್ತಿದ್ದೀರಿ, ಆದರೆ ಹಳೇ ಕಾಲುವೆಗಳು ಮುಚ್ಚಿ ಹೋಗತಕ್ಕಂತಹ ಪರಿಸ್ಥಿತಿ ಸೃಷ್ಟಿಯಾಗಿದೆ. ಈಗ ಮುಖ್ಯ ಮಂತ್ರಿಯವರ ಪರವಾಗಿ ಸನ್ಮಾನ್ಯ ಗೃಹ ಮಂತ್ರಿಯವರಾದ ಸಿಂಧ್ಯರವರು ಉತ್ತರ ಓದಿದ್ದಾರೆ. ಇದಕ್ಕೆ ಸಂಬಂಧಪಟ್ಟಂತೆ ಮೈಸೂರು ಹಾಗೂ ಮಂಡ್ಯ ಜಿಲ್ಲೆ ಎಲ್ಲಾ ಶಾಸಕರನ್ನು ಕರೆದು ಅತ್ಯಂತ ಗಂಭೀರವಾಗಿ ಚರ್ಚೆ ಮಾಡಿ ಇದಕ್ಕೆ ಒಂದು ಅಂತಿಮವಾದ ರೂಪ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಏಕೆಂದರೆ ಏಪ್ರಿಲ್ ಮೇ ತಿಂಗಳಲ್ಲಿ ಮಳೆಗಾಲದಲ್ಲಿ ಮಾಡಿದರೆ ನಮಗೆ ಸುಲಭವಾಗುತ್ತದೆ. ಏಪ್ರಿಲ್ ಮೇ ತಿಂಗಳು ಕಳೆದರೆ ಅನುಕೂಲವಾಗುತ್ತದೆ ದಯವಿಟ್ಟು ಇದರ ಬಗ್ಗೆ ತಾವು ಮಾನ್ಯ ಬಹಳ

ಮಂತ್ರಿಗಳು ಗಮನಕ್ಕೆ ತಂದು ದಯವಿಟ್ಟು ಸಭೆಯನ್ನು ಕರೆದು ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಸನ್ಮಾನ್ಯ ಗೃಹ ಮಂತ್ರಿಯವರನ್ನು ಕೋರುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರುಗಳಾದ ನಾಗೇಗೌಡರು ಕೃಷ್ಣಪ್ಪನವರು ಮತ್ತು ಪುಟ್ಟಣ್ಣಯ್ಯನವರು ಅನೇಕ ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಬಹಳ ಮುಖ್ಯವಾಗಿ ಟೀನರಸೀಪುರ, ಬನ್ನೂರು ಟೇಲ್‌ಎಂಡರ್ಸ್‌ಗೆ ನೀರು ಸಿಗದೆ ಇರತಕ್ಕಂಥಾದ್ದು ಮತ್ತು ಅನೇಕ ಅಕ್ವಡಟ್ ಕೆಲಸವನ್ನು ಬೇಗ ಮಾಡಿಸಿಕೊಡತಕ್ಕಂಥದ್ದು ಮತ್ತು ಬಹಳ ಮುಖ್ಯವಾಗಿ ಈ ಆಧುನೀಕರಣ ಕೆಲಸಕ್ಕೆ ಹಣವನ್ನು ಬಿಡುಗಡೆ ಮಾಡುವುದು ಬಡ್ಜೆಟ್‌ನಲ್ಲಿ ಅಷ್ಟೇ ಅಲ್ಲ, ಎಲ್‌ಒಸಿಯನ್ನು ಬಿಡುಗಡೆ ಮಾಡಬೇಕು ಎನ್ನತಕ್ಕಂತಹ ಸಲಹೆಯನ್ನು ಕೊಟ್ಟಿದ್ದಾರೆ. ಹಾಗೂ ಮಂಡ್ಯ, ಮೈಸೂರು ಜಿಲ್ಲೆ ಶಾಸಕರನ್ನು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ನೀರಾವರಿ ಮಂತ್ರಿಗಳು ಕರೆದು ಸಮಾಲೋಚನೆ ಮಾಡಿ ಈ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಿಸಿ ಕೊಡಬೇಕು ಎನ್ನತಕ್ಕಂತಹ ಮಾತನ್ನು ಹೇಳಿದ್ದಾರೆ.

12.50 ಪಿ.ಎಂ

ಈ ಭಾನುವಾರ ಕಾವೇರಿಗೆ ಸಂಬಂಧಪಟ್ಟಹಾಗೆ ಮಾನ್ಯ ಮುಖ್ಯಮಂತ್ರಿಗಳು ಎಲ್ಲರನ್ನೂ ಸಭೆಗೆ ಕರೆದಿದ್ದಾರೆ. ನಾನೂ ಸಹ ಭರವಸೆಯನ್ನು ಕೊಡುತ್ತೇನೆ. ನಾವೆಲ್ಲರೂ ಕುಳಿತು ಚರ್ಚೆ ಮಾಡೋಣ. ಏಕೆಂದರೆ ನಾನು ನೀರಾವರಿ ಮಂತ್ರಿಯಾಗಿದ್ದಾಗ, ಹೊನ್ನೊರಿಗೆ ಮತ್ತು ಟಿ. ನರಸೀಪುರಕ್ಕೆ ಬಂದಿದ್ದೇನೆ. ಮಾಧವಮಂತ್ರಿ ಮತ್ತು ಸಿ.ಡಿಚಾನೆಲ್ ಎಲ್ಲವನ್ನು ನಾವು ನೋಡಿರತಕ್ಕಂಥಾದ್ದು. ನನಗೂ ಸಹ ಅಲ್ಲಿನ ಪರಿಸ್ಥಿತಿಯ ಸಂಪೂರ್ಣ ಮಾಹಿತಿ ಇದೆ. ನಾನೂ ಸಹ ಕಾವೇರಿ ಬೆಲ್ಟ್‌ಗೆ ಬರತಕ್ಕಂಥಾವನು. ಆ ಭರವಸೆಯನ್ನು ಕೊಡುತ್ತೇನೆ. ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿ ಭಾನುವಾರ ನಾವು ಕುಳಿತು ಕೊಂಡಾಗ ಅದರ ಬಗ್ಗೆಯೂ ಸಹ ಚರ್ಚೆ ಮಾಡಿ ಆ ಸಮಸ್ಯೆಯನ್ನು ಬಗೆಹರಿಸಲು ಪ್ರಯತ್ನ ಮಾಡೋಣ ಬಹಳ ಮುಖ್ಯವಾಗಿ ಅದಕ್ಕೆ ರೈತರು ಸಹಕಾರ ಮಾಡುವಂತಾದ್ದು ಹಾಗೂ ಅದಕ್ಕೆ ಬೇಕಾಗಿರತಕ್ಕಂಥ ಹಣವನ್ನು ಬಿಡುಗಡೆ ಮಾಡತಕ್ಕಂಥಾದ್ದು ಮತ್ತೊಂದು. ಅದರ ಬಗ್ಗೆ ನಾನು ಅವರಿಗೆ ಭರವಸೆ ಕೊಡುತ್ತೇನೆ. ನಾವು ಏನು ಈ ವರ್ಷ ಬಜೆಟ್‌ನಲ್ಲಿ 32 ಕೋಟಿ ರೂಪಾಯಿಗಳನ್ನು ಆಧುನಿಕರಣದ ಕೆಲಸಕ್ಕೆ ಕೊಡುತ್ತೇವೆಂದು ಹೇಳಿದ್ದೇವೆ, ಅದನ್ನು ಎಲ್‌ಒಸಿ ರೂಪಾದಲ್ಲಿ ಕೊಡುತ್ತೇವೆ. ಈ ಕೆಲಸವನ್ನು ಆದಷ್ಟು ಬೇಗ ಮುಗಿಸಬೇಕು ಎಂದು. 1997ನೇ ಇಸವಿಗೆ ಅಲ್ಲ, 1996ರ ಕೊನೆಯಲ್ಲಿ ಈ ಎಲ್ಲಾ ಕೆಲಸವನ್ನು ಮಾಡತಕ್ಕಂಥ ಪ್ರಯತ್ನ ಮಾಡುತ್ತೇವೆ ಎನ್ನುವ ಭರವಸೆಯನ್ನು ಈ ಸಂದರ್ಭದಲ್ಲಿ ಕೊಡುತ್ತೇನೆ.

ಶ್ರೀ ಎಸ್.ಕೃಷ್ಣಪ್ಪ : ಹೂಳು ಎತ್ತುವುದಕ್ಕೆ ಹಣ ಕೊಡುವುದರ ಬಗ್ಗೆ ಏನೂ ಹೇಳಲಿಲ್ಲ.

ಶ್ರೀ ಪಿ.ಜಿ.ಆರ್.ಸಿಂಧ್ಯ : ಆಧುನೀಕರಣ ಎಂದರೆ ಹೂಳು ಎತ್ತತಕ್ಕಂಥಾದ್ದು ತೂಬು ಎತ್ತತಕ್ಕಂಥಾದ್ದು, ಕಟ್ಟತಕ್ಕಂಥಾದ್ದು, ಎಲ್ಒಸಿ ಬಿಡುಗಡೆ ಮಾಡತಕ್ಕಂಥಾದ್ದು ಇದೆಲ್ಲಾ ಸೇರಿಕೊಂಡು ಬಿಡುತ್ತದೆ. ಇದು ರಸಾಯನ ಇದ್ದಹಾಗೆ.

ಶ್ರೀ ಎನ್.ಕೃಷ್ಣಪ್ಪ : ಹಳೆ ನಾಲೆ ಸೇರುವುದಿಲ್ಲ ಸ್ವಾಮಿ. ತಾವು ಗ್ರಾಂಟ್ ಕೊಟ್ಟಿಲ್ಲ. ತಮ್ಮಲ್ಲಿ ನಾನು ಮನವಿ ಮಾಡಿಕೊಳ್ಳುತ್ತೇನೆ, ಅದಕ್ಕೆ ದುಡ್ಡು ಕೊಟ್ಟಿಲ್ಲ. ತಾವು ದಯವಿಟ್ಟು ಹೊಸದಾಗಿ ದುಡ್ಡು ಕೊಡಬೇಕಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನನಗೆ ಗೊತ್ತಿದೆ, ಟೈಲ್ ಎಂಡರ್ಸ್‌ಗೆ ನೀರು ಹೋಗುತ್ತಿಲ್ಲ, ಅವರ ಕ್ಷೇತ್ರದಲ್ಲೇ ಬಹಳ ತೊಂದರೆ ಇದೆ, ಬೆಳೆ ಆಗುತ್ತಿಲ್ಲ. ಅವರ ಸಮಸ್ಯೆಗಳನ್ನು ಬಗೆಹರಿಸುತ್ತೇವೆ.

೫) ದಕ್ಷಿಣ ಕನ್ನಡ ಜಿಲ್ಲೆಯ ಎನ್.ಕೆ.ಸಿ.ಸಿ.ಡಬ್ಲ್ಯು ಸ್ಟೋರ್ಸ್ (ಜನತಾ ಬಜಾರಿಗೆ) ಚುನಾಯಿತ ಆಡಳಿತ ಮಂಡಳಿಯನ್ನು ರದ್ದುಗೊಳಿಸಿ ವಿಶೇಷಾಧಿಕಾರಿಯವರನ್ನು ನೇಮಿಸಿರುವುದರಿಂದ ಸಾರ್ವಜನಿಕರಿಗೆ ತೊಂದರೆ

ಶ್ರೀ ಡಿ.ವಿ.ಸದಾನಂದ ಗೌಡ(ಸುಳ್ಯ) : ದಕ್ಷಿಣ ಕನ್ನಡ ಜಿಲ್ಲೆಯ ಎಸ್.ಕೆ.ಸಿ.ಸಿ.ಡಬ್ಲ್ಯು ಸ್ಟೋರ್ಸ್‌ನ ಚುನಾಯಿತ ಮಂಡಳಿಯನ್ನು ರದ್ದುಗೊಳಿಸಿ ವಿಶೇಷಾಧಿಕಾರಿಯನ್ನು ನೇಮಿಸಿರುವುದರಿಂದ ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆ ಬಗ್ಗೆ ಮಾನ್ಯ ಸಹಕಾರ ಸಚಿವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್ (ಸಹಕಾರ ಸಚಿವರು): ಮಾನ್ಯ ಅಧ್ಯಕ್ಷರೆ, ತಮ್ಮ ಅನುಮತಿಯನ್ನು ಪಡೆದು ಈ ಹೇಳಿಕೆಯನ್ನು ನೀಡಬಯಸುತ್ತೇನೆ.

ದಕ್ಷಿಣ ಕನ್ನಡ ಜಿಲ್ಲೆಯ ಎಸ್.ಕೆ.ಸಿ.ಸಿ.ಡಬ್ಲ್ಯು ಸ್ಟೋರ್ಸ್ ಇದರ ಮೇಲೆ ಕಾಯ್ದಿಟ್ಟ ನಿಧಿಯನ್ನು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನಲ್ಲಿ ಗುರಿತಾಯಿಸದೇ ಇರುವುದೇ ಹಲವಾರು ಪ್ರಕರಣಗಳಲ್ಲಿ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ ಉಲ್ಲಂಘಿಸಿರುವುದು, ನಿಬಂಧಕರ ಪೂರ್ವಾನುಮತಿ ಪಡೆಯದೆ ಹಲವಾರು ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡಿರುವುದು ಜನರೇಟರ್ ಖರೀದಿ ಮಾಡಿದ್ದು, ವ್ಯಾಪಾರ ಮಳಿಗೆ ತೆಗೆದಿರುವುದು, ಹಣ ಖರ್ಚು ಮಾಡಿರುವುದು ನೌಕರರಿಂದ ಹಣ ವಸೂಲಿಗೆ ಕ್ರಮ ಕೈಗೊಳ್ಳದೇ ಇರುವುದು ಇಂತಹ ಇನ್ನಿತರ ಹಲವಾರು ಗುರುತರವಾದ ಅಪಾದನೆಗಳು ಬರಲಾಗಿ ಮೊದಲಿಗೆ ಕರ್ನಾಟಕ ಸಹಕಾರ ಸಂಘಗಳ ಕಾಯಿದೆ, 1959ರ ಕಲಂ 65ರ ಮೇರೆಗೆ ಪರಿವೀಕ್ಷಣೆ ಮಾಡಲು ವಿಚಾರಣಾಧಿಕಾರಿಗಳನ್ನು ನೇಮಿಸಲಾಯಿತು. ತದನಂತರ ಅವರು ನೀಡಿದ ವರದಿ ಹಾಗೂ ಅದರಲ್ಲಿನ ಅಪಾದನೆಗಳ ಅನುಸಾರ ಅದೇ ಕಾಯ್ದೆಯ ಕಲಂ 68ರ ಅನ್ವಯ ಲೋಪದೋಷಗಳನ್ನು ಸರಿಪಡಿಸಲು ಆದೇಶ ಹೊರಡಿಸಲಾಗಿದ್ದಿತು. ಇದಾದ ನಂತರ ಸಹಕಾರ ಸಂಘಗಳ ನಿಬಂಧಕರು ಮಾಡಿದ ಶಿಫಾರಸ್ಸನ್ನು ಅನುಸರಿಸಿ ಸರ್ಕಾರ ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರ ಕಲಂ 30(ಎ) ಪ್ರಕಾರ ಆಡಳಿತವನ್ನು ತನ್ನ ವಶಕ್ಕೆ ತೆಗೆದುಕೊಂಡು ವಿಶೇಷಾಧಿಕಾರಿಗಳನ್ನು ನೇಮಿಸಿತು. ಈ ಎಲ್ಲಾ ಅಂಶಗಳಿಂದ ಸರ್ಕಾರ ಹೆಚ್ಚಿನ ಅಧಿಕಾರ ಚಲಾಯಿಸಿ ಸಂಘದ ಆಡಳಿತವನ್ನು ತೆಗೆದುಕೊಂಡಿದೆ. ಎನ್ನುವುದು ಸರಿಯಲ್ಲ.